ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

13

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 16/12/20

# ವಿಧಾನ ಪರಿಷತ್ ಗಲಾಟೆ

# ಪ್ರಜಾಪ್ರಭುತ್ವದ ಅಣಕ

ರಾಜ್ಯ ವಿಧಾನಪರಿಷತ್‌ನಲ್ಲಿ ಮಂಗಳವಾರ ನಡೆದ ವಿದ್ಯಮಾನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಪ್ಪುಚುಕ್ಕೆ. ಪರಿಷತ್‌ನ ಇತಿಹಾಸದಲ್ಲಿ ಇಂತಹ ಘಟನೆ ಎಂದೂ ನಡೆದಿರಲಿಲ್ಲ. ಸಭಾಪತಿ ಪೀಠಕ್ಕೆ ಅಗೌರವ ಅಷ್ಟೇ ಅಲ್ಲದೆ ಆ ಸ್ಥಾನದ ಘನತೆಗೆ ಕುಂದುಂಟು ಮಾಡಿದ್ದಕ್ಕೆ ಒಂದು ರೀತಿಯಲ್ಲಿ ಮೂರೂ ರಾಜಕೀಯ ಪಕ್ಷಗಳು ಕಾರಣವಾಗಿವೆ. ಇಡೀ ಸಂಸದೀಯ ಪ್ರಜಾಸತ್ತೆಗೆ ಮಾದರಿಯಾಗಿದ್ದ ವಿಧಾನಪರಿಷತ್ ಈ ಸ್ಥಿತಿಗೆ ಮುಟ್ಟಿರುವುದು ಶೋಚನೀಯ.

ಪಕ್ಷ ರಾಜಕಾರಣ ಹಾಗೂ ಪ್ರತಿಷ್ಠೆಯಿಂದಾಗಿ ಸದನದಲ್ಲಿ ನೂಕಾಟ, ತಳ್ಳಾಟ, ತೋಳ್ಬಲ ಪ್ರದರ್ಶನದ ಅಟ್ಟಹಾಸ ಮೆರೆದು ಸಭಾಪತಿ ಪೀಠದ ಮೇಲೆ ಸದಸ್ಯರು ಹೋಗಿ ಕುಳಿತದ್ದು ನಿಜಕ್ಕೂ ದುರಂತವೇ ಸರಿ. ಸಭಾಪತಿಯವರ ಮೇಲೆ ವಿಶ್ವಾಸ ಇಲ್ಲ ಎಂದು ನೋಟಿಸ್ ಕೊಟ್ಟ ನಂತರ ಅದು ನಿಯಮಾವಳಿ ಪ್ರಕಾರ ಇದೆಯೋ ಇಲ್ಲವೋ ನೈತಿಕತೆ ಪ್ರಶ್ನೆಯಿಂದಾದರೂ ಸಭಾಪತಿ ರಾಜೀನಾಮೆ ನೀಡಬಹುದಿತ್ತು. ಕಾಂಗ್ರೆಸ್ ಪಕ್ಷವೂ ಈ ಕುರಿತು ಸೂಚನೆ ನೀಡಬಹುದಿತ್ತು. ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಡಿ.15ರವರೆಗೂ ಕಲಾಪ ನಡೆಸಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಸಮ್ಮುಖದಲ್ಲಿ ಎಲ್ಲ ಪಕ್ಷಗಳು ಒಪ್ಪಿ ತೀರ್ಮಾನವಾಗಿದ್ದರೂ ಅದನ್ನು ಸದನಕ್ಕೂ ತಿಳಿಸದೆ ಅನಿರ್ದಿಷ್ಟ ಅವಧಿಗೆ ಮುಂದೂಡಿದ್ದು ಮತ್ತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಪತ್ರ ಬರೆದ ನಂತರ ಒಂದು ದಿನದ ಕಲಾಪ ನಿಗದಿ ಮಾಡಿದ್ದು ಯಾಕೆ ಎಂಬ ಜಿಜ್ಞಾಸೆಯೂ ಇದೆ. ಎಲ್ಲ ಪಕ್ಷಗಳಿಂದ ಭಿನ್ನ ಎಂದು ಹೇಳಿಕೊಳ್ಳುವ ಬಿಜೆಪಿ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ಕಾರ್ಯಸೂಚಿಯಲ್ಲಿ ಇಲ್ಲದಿದ್ದರೂ ಸಭಾಪತಿಯವರು ಪೀಠ ಅಲಂಕರಿಸಿದ ನಂತರ ನಿಮ್ಮ ಮೇಲೆ ವಿಶ್ವಾಸ ಇಲ್ಲ ಉಪ ಸಭಾಪತಿಯವರು ಕಲಾಪ ನಡೆಸಲಿ ಎಂದು ಒತ್ತಾಯಿಸಬಹುದಿತ್ತು. ಸಭಾಪತಿಯವರು ಸದನಕ್ಕೆ ಬರದಂತೆ ತಡೆದು ಸದನ ಆರಂಭವಾಗುವ ಮುನ್ನವೇ ಉಪ ಸಭಾಪತಿಯನ್ನು ಪೀಠದಲ್ಲಿ ಕುಳ್ಳಿರಿಸಿದ್ದು ಯಾರೂ ಒಪ್ಪಲಾಗದು.

ಅದೇ ರೀತಿಯ ಉಪ ಸಭಾಪತಿಯವರನ್ನು ಕಾಂಗ್ರೆಸ್ ಸದಸ್ಯರು ಎಳೆದಾಡಿ ಅಲ್ಲಿಂದ ತೆರವು ಮಾಡಿಸಿದ್ದೂ ಸಮರ್ಥಿಸಿಕೊಳ್ಳಲಾಗದು. ಜೆಡಿಎಸ್‌ನ ನಡೆಯೂ ಚರ್ಚೆಗೆ ಗ್ರಾಸವಾಗಿದೆ. ಒಟ್ಟಾರೆ ಪರಿಷತ್‌ನಲ್ಲಿ ನಡೆದ ಘಟನಾವಳಿಗಳು ಪ್ರಜಾ ಪ್ರಭುತ್ವದ ಅಣಕವೇ ಸರಿ. ಶತಮಾನದ ಇತಿಹಾಸ ಹೊಂದಿರುವ ವಿಧಾನ ಪರಿಷತ್ತಿನ ಸಭಾಪತಿಯವರ ವಿರುದ್ಧ ಅವಿಶ್ವಾಸ ಮಂಡನೆ ನಡೆದಿರುವುದು ಇದು ಎರಡನೇ ಬಾರಿ. ಈ ಹಿಂದೆ 2017ರಲ್ಲಿ ಆಗಿನ ಸಭಾಪತಿ ಆಗಿದ್ದ ಡಿ.ಎಚ್. ಶಂಕರ ಮೂರ್ತಿಯವರ ವಿರುದ್ಧ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಅವಿಶ್ವಾಸ ನಿರ್ಣಯ ಮಂಡಿಸಿತ್ತು. ಆದರೆ, ಒಂದು ಮತದಿಂದ ಅದಕ್ಕೆ ಸೋಲಾಗಿತ್ತು. ಈಗ ಆಡಳಿತಾ ರೂಢ ಪಕ್ಷವಾಗಿರುವ ಬಿಜೆಪಿ ಈಗಿನ ಸಭಾಪತಿ ವಿರುದ್ಧ ಅವಿಶ್ವಾಸದ ಅಸ್ತ್ರ ಬಳಸಿದೆ.

ನಮ್ಮ ರಾಜ್ಯದ ವಿಧಾನಪರಿಷತ್ತಿಗೆ ವಿಶೇಷ ಸ್ಥಾನಮಾನವಿದೆ. 1907ರಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿರುವ ಪರಿಷತ್‌ಗೆ ಶತಮಾನದ ಇತಿಹಾಸವಿದೆ. 1952ರಿಂದ ಈವರೆಗೆ ಒಟ್ಟು 44 ಮಂದಿ ಸಭಾಪತಿ ಸ್ಥಾನ ಅಲಂಕರಿಸಿದ್ದಾರೆ. ಶಿಷ್ಟಾಚಾರದ ಪ್ರಕಾರ ರಾಜ್ಯಪಾಲರ ನಂತರದ ಸ್ಥಾನ ವಿಧಾನಪರಿಷತ್ತಿನ ಸಭಾಪತಿಯವರಿದ್ದು ನಂತರದ ಸ್ಥಾನದಲ್ಲಿ ಕ್ರಮವಾಗಿ ವಿಧಾನಸಭೆಯ ಅಧ್ಯಕ್ಷರು, ಮುಖ್ಯಮಂತ್ರಿಯವರು ಹಾಗೂ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಯವರು ಬರುತ್ತಾರೆ. ಇಂತಹ ಘನತೆ ಹೊಂದಿರುವ ಸಭಾಪತಿ ಸ್ಥಾನ ರಾಜಕೀಯ ಮೇಲಾಟಗಳಿಗೆ 'ವಿಷಯ ವಸ್ತು' ಆಗುತ್ತಿರುವುದು ವಿಪರ್ಯಾಸ. ರಾಜ್ಯದ ಶಾಸಕಾಂಗ ವ್ಯವಸ್ಥೆಯಲ್ಲಿ ಮೇಲ್ಮನೆ, ಚಿಂತಕರ ಚಾವಡಿ ಎಂದೆಲ್ಲ ಕರೆಸಿಕೊಳ್ಳುವ ವಿಧಾನಪರಿಷತ್ತಿನ ಈಗಿನ ಬೆಳವಣಿಗೆಗಳು ದುರದೃಷ್ಟಕರ.